'ನೀವು ಗಾಯನ ಸ್ಪರ್ಧೆಯ ಶೋ ನೋಡುತ್ತಿದ್ದುದಾದರೆ ನಾನು ಹೇಗೆ ಅಭ್ಯಾಸ ಮಾಡುತ್ತಿದ್ದೆ ಎನ್ನುವುದನ್ನ ನಿರೂಪಕಿ ಹೇಳಿದ್ದಾಳೆ, ನೀವು ಕೇಳಿಸಿಕೊಂಡಿದ್ದೀರಿ.'

ಮೊದಲ ಪ್ರಶ್ನೆ ಕೇಳಿದವನಿಗೆ ಮತ್ತೆ ಅವಕಾಶ ಕೊಡಬಾರದೆನ್ನುವಂತೆ ವಿಷಯ ಬದಲಿಸುತ್ತ ಹಳೆಯ ಪತ್ರಕರ್ತನೊಬ್ಬ ಪ್ರಶ್ನಿಸಿದ – 'ನಿಮ್ಮ ಅತ್ಯುತ್ತಮ ಹಾಡುಗಳು – ಅಂದರೆ ಹೆಚ್ಚು ಅಂಕಗಳು ಬಂದದ್ದು – ನೋವಿನದ್ದನಿಯ ಹಾಡುಗಳಿಗೆ ಅಂತಾರೆ. ಸಹಜವೇ. ಅಪರಾಧ ಮಾಡಿ ಪಶ್ಚಾತ್ತಾಪ ಹೊಂದಿರುವವರಿಂದ ಬರಬಹುದಾದದ್ದೆ. ಆದರೆ, ಸಂತೋಷದ ಗೀತೆಗಳನ್ನು ಕೂಡ, ಸ್ಪರ್ಧೆಯ ನಿಯಮದಂತೆ, ಚನ್ನಾಗಿಯೇ ಹಾಡಿದ್ದೀರಿ.'

'ಹ–ಹೌದು.'

'ಹೇಳಿ, ನಿಮ್ಮ ಸಂತೋಷದ ಗಳಿಗೆ ಯಾವುದು?'

'ಆ ಹಾಡುಗಳನ್ನ ಹಾಡಿದ ಘಳಿಗೆ.'

ಯಾರೇನು ಅರ್ಥ ಮಾಡಿಕೊಂಡರೋ, ಆತ ತಲೆ ಕೆಡಿಸಿಕೊಳ್ಳಲಿಲ್ಲ.

'ನೀವು ತಪ್ಪು ಮಾಡಿ ಹನ್ನೆರಡು ವರ್ಷ ಆಯುಸ್ಸನ್ನ ಕಳೆದುಕೊಂಡಿರಿ ಅಂತ ನಿಮಗನ್ನಿಸೋಲ್ಲವಾ? ಅದಿಲ್ಲವಾದರೆ ಈ ಹೊತ್ತಿಗೆ ನೀವು ಪ್ರಸಿದ್ಧ ಹಾಡುಗಾರರಾಗಿ ಎಲ್ಲೋ ಇರುತ್ತಿದ್ದಿರಿ ಅನ್ನಿಸೋಲ್ಲವಾ? ಹಾಡುಗಾರನ ಮನಸ್ಸು ಕೋಮಲವಾಗಿರುತ್ತೆ ಅನ್ನುತ್ತಾರೆ. ಅದು ಕ್ರೂರವಾಗಬಾರದಲ್ಲವಾ?'

ಆತನಿಗೆ ತೀವ್ರ ದಣಿವೆನ್ನಿಸತೊಡಗಿತು. ಆತ ಮುಖ ಮುಚ್ಚಿ ಕುಳಿತ ಮತ್ತು ಯಾರ ಪ್ರಶ್ನೆಗೂ ಉತ್ತರಿಸಲಿಲ್ಲ. ಪ್ರಶ್ನೆಗಳ ಬೆಂಕಿಯ ಮಳೆಗೆ ತಣ್ಣಗೆ ತಲೆಯೊಡ್ಡಿ ಕುಳಿತ ಅವನನ್ನ ಕಂಡ ಪತ್ರಕರ್ತರು ಅನಿವಾರ್ಯವಾಗಿ ಜಾಗ ಖಾಲಿ ಮಾಡಿದರು.

★★★

ಮುಂದೆ ಎಲ್ಲಿಗೆ ಹೋಗುವುದು? ಆತ ನಿಟ್ಟುಸಿರಾದ. ಸೆರೆಮನೆಯಿಂದ ಹೊರಬಂದಾಗಲೂ ಇದೇ ಪ್ರಶ್ನೆಯಿತ್ತು. ತನ್ನನ್ನ ಸ್ವಾಗತಿಸಲು ಯಾರೂ ಬಂದಿರಲಿಲ್ಲ. ಆದರೆ, ಜೈಲಿನ ಕೆಲಸದಲ್ಲಿದ್ದಾಗ ದುಡಿಮೆಯಿಂದ ಬಂದ ಒಂದಿಷ್ಟು ದುಡ್ಡನ್ನ ಜೈಲರ್ ಕೊಟ್ಟು, ನಿನ್ನ ಒಳ್ಳೆಯ ನಡತೆಯಿಂದಾಗಿ ಇಷ್ಟು ಬೇಗ ಬಿಡುಗಡೆಯಾಗುತ್ತಿದ್ದೀಯ, ಕಚ್ಚಿ ಸಾಯುವ ಜೇನುಹುಳವಾಗಬೇಡ, ಕೋಪದ ಕೈಗೆ ಬುದ್ಧಿ ಕೊಡಬೇಡ, ಎಂದವರೇ ಆತ ದುಡಿದ ಹಣದೊಟ್ಟಿಗೆ ತಮ್ಮ ಹಣವನ್ನೂ ಒಂದಿಷ್ಟು ಸೇರಿಸಿ ಕೊಟ್ಟಿದ್ದರು. ಯಾಕೋ ಇಲ್ಲಿಯ ತನ್ನ ಕೋಣೆಯನ್ನ, ತನ್ನ ದಿನನಿತ್ಯದ ಹಾಡಿಗೆ ತಮ್ಮ ಊಟದ ತಟ್ಟೆಯನ್ನ ಬಡಿಯುತ್ತ ಕುಣಿಯುತ್ತಿದ್ದ ಸಹ ಕೈದಿಗಳನ್ನೆಲ್ಲ ಬಿಟ್ಟು ಹೋಗುವುದಕ್ಕೆ ತುಂಬಾ, ತುಂಬಾ ಕಷ್ಟವಾಗಿತ್ತು. ಜೈಲಿನಿಂದ ಹೊರಟು ದಿಕ್ಕು ದೆಸೆಯಿಲ್ಲದೆ ಹಸಿವಾದಾಗ ಕಂಡ ಹೋಟೆಲಿಗೆ ನುಗ್ಗಿ, ನಿದ್ದೆ ಬಂದಾಗ ಬಸ್ ನಿಲ್ದಾಣದಲ್ಲೋ ರೈಲ್ವೇ ಸ್ಟೇಶನ್ನಿನಲ್ಲೊ ಮಲಗಿ ಎರಡು ದಿನ ಕಳೆಯುವಷ್ಟರಲ್ಲಿ, ಥೆ ತನ್ನ ಬದುಕು ಹೀಗೆ ಅಲೆಮಾರಿಯಾಗಿ ಎಷ್ಟು ದಿನ ಕಳೆದೀತು, ಮೊದಲೊಂದು ನೆಲೆ ಹುಡುಕಿಕೊಳ್ಳಬೇಕು, ಏನಾದರೂ ಕೆಲಸ ಹುಡುಕಿಕೊಂಡು ಬದುಕಿಗೊಂದು ದಾರಿ ಕಂಡುಕೊಳ್ಳಬೇಕು ಎನ್ನಿಸತೊಡಗಿತು. ಆದರೆ, ಜೈಲಿನಿಂದ ಬಂದವನಿಗೆ ಯಾರು ಉಳಿದುಕೊಳ್ಳಲು ಮನೆ ಕೊಡುತ್ತಾರೆ? ಅಷ್ಟು ಪಗಡಿಯನ್ನೊ ಬಾಡಿಗೆಯನ್ನೊ ಕೊಡಲು ತನ್ನಲ್ಲಿ ದುಡ್ಡೆಲ್ಲಿದೆ? ಇನ್ನು ಕೆಲಸ: ಕೂಲಿಯೊ, ಹಮಾಲಿಯೋ... ಏನೋ ಒಂದು. ಊಟಕ್ಕಾಗುವಷ್ಟು... ಈ ದೊಡ್ಡ ಪಟ್ಟಣದಲ್ಲಿ ಏನಾದರೂ ಕೆಲಸ ಸಿಕ್ಕಿಯೇ ಸಿಗುತ್ತದೆ. ಅಥವಾ ಊರಿಗೇ ಹೋದರೆ ಹೇಗೆ? ತಾನು ಹುಟ್ಟಿ ಬೆಳೆದ, ಅಮ್ಮನ ಮಡಿಲೊಳಾಡಿದ, ಗೆಳೆಯರೊಟ್ಟಿಗೆ ನಲಿದಾಡಿ ದಣಿದ ಬಾಲ್ಯದ ಮಣ್ಣಿಗೆ? ಇಲ್ಲ, ಈಗಲ್ಲ, ಈಗಲ್ಲವೇ ಅಲ್ಲ. ಸಮಾಜದ ವ್ಯವಸ್ಥೆ ತೋಡಿದ ಬಾವಿಯ ಮಣ್ಣಿನ ಗುಡ್ಡೆಯ ಮೇಲೆ ನಿಂತು ಆಳ ನೊಡುವುದಲ್ಲ. ಒಂದೆಡೆ ನೆಲೆ ನಿಂತಬಳಿಕ ಅಪರಿಚಿತನಂತೆ ಹೋಗಿ